Date : 27-10-2015

# ಹತ್ತಿ ದರ ಹೆಚ್ಚಳವಾಗುವ ಸಾಧ್ಯತೆ– JAU ಮೂನ್ಸೂಚನಾ ಅಧ್ಯಯನ ವರದಿ

ಜುನಾಗಢ ಕೃಷಿ ವಿಶ್ವವಿದ್ಯಾಲಯದ ಮೂನ್ಸೂಚನಾ ಅಧ್ಯಯನ ವರದಿ ಹತ್ತಿ ದರ ಹೆಚ್ಚಳದ ಸಾಧ್ಯತೆಯನ್ನು ಸೂಚಿಸಿದೆಯೆನ್ನಲಾಗಿದೆ. ಗುಣಮಟ್ಟದ ಹತ್ತಿ ಲಭ್ಯತೆ ಕೊರತೆ ಮತ್ತು ದೇಶೀ ಮತ್ತು ರಫ್ತು ಬೇಡಿಕೆ ಹೆಚ್ಚಳ ಸಂಭವವಿರುವುರಿಂದ 2015 ನವೆಂಬರ್ ಮತ್ತು 2016 ಜನವರಿ ಅವಧಿಯಲ್ಲಿ ಹತ್ತಿ ದರ ಹೆಚ್ಚಳದ ಸಾಧ್ಯತೆಯಿದೆಯೆಂದು ವರದಿ ತಿಳಿಸಿದೆಯೆನ್ನಲಾಗಿದೆ. ಜುನಾಗಢ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಭಾಗದ ಅರ್ಥಿಕ ತಂಡದ ಅರ್ಥಿಕ ವಿಶ್ಲೇಷಣೆಯನ್ವಯ ಕಚ್ಚಾ ಹತ್ತಿ ದರ ಹಿಂದೆ ಹೇಳಿದ ಅವಧಿಯಲ್ಲಿ 20 ಕಿಲೊಗ್ರಾಂಗೆ ರೂ. 840 ರಿಂದ 920ರ ತನಕ ಹೆಚ್ಚಳವಾಗುವ ಸಂಭವವಿದೆಯೆನ್ನಲಾಗಿದೆ. ಈಗ ಹತ್ತಿ 20 ಕಿಲೊಗ್ರಾಂಗೆ ರೂ. 825–880 ರ ತನಕ ಮಾರಾಟವಾಗುತ್ತಿದೆಯೆನ್ನಲಾಗಿದೆ. 'ಕಪಾಸ್'ನ ದರ ಉತ್ಪಾದನೆ ಕಡಿಮೆಯಾಗುವ ನಿರೀಕ್ಷೆಯಿಂದ ಹಾಗೂ ರೋಗಬಾಧೆಯಿಂದ ಗುಣಮಟ್ಟ ಬಾಧಿತವಾಗುವ ಸಂಭವನೀಯತೆಯಿಂದ ಹೆಚ್ಚಳವಾಗಬಹದೆನ್ನಲಾಗಿದೆ. ಕೃಷಿ ಸಚಿವಾಲಯದ ಪ್ರಥಮ ಮುನ್ಸೂಚನಾ ವರದಿಯನ್ನದ್ದಾರಿಸಿ, JAU ವರದಿಯಲ್ಲಿ ಹತ್ತಿಯ ಈ ವರ್ಷದ ಉತ್ಪಾದನೆ (2015–16) 33.5ಮಿಲಿಯನ್ ಟನ್‌ಗಳಾಗಬಹುದೆಂದು ಹೇಳಿದೆಯೆನ್ನಲಾಗಿದೆ. ಹಿಂದಿನ ವರ್ಷ 35.47 ಮಿಲಿಯನ್ ಟನ್ ಉತ್ಪಾದನೆಯಾಗಿತ್ತು. 2014–15ರಲ್ಲಿದ್ದ ಬೆಳೆಪ್ರದೇಶವಾದ 13.08ಮಿಲಿಯನ್ ಹೆಕ್ಟೇರ್‌ನಿಂದ 2015–16ರಲ್ಲಿ 11.7ಮಿಲಿಯನ್ ಹೆಕ್ಟೇರ್‌ಗೆ ಇಳಿಕೆ ಮತ್ತು ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕಗಳಲ್ಲಿ ಮುಂಗಾರು ಅವಧಿಯ ಮಳೆ ಕಡಿಮೆಯಾಗಿರುವುರಿಂದ ಉತ್ಪಾದನೆ ಇಳಿಕೆಯಾಗಬಹುದೆನ್ನಲಾಗಿದೆ. ಪಂಜಾಬ್ ಮತ್ತು ಹರ್ಯಾಣಗಳಲ್ಲಿ ಬೆಳೆಗೆ ಕೀಟ ಬಾಧೆಯ ವರದಿಯಾಗಿದ್ದು ಅಲ್ಲಿಯೂ ಉತ್ಪಾದನೆ ಇಳಿಕೆ ಸಂಭವವಿದೆಯೆನ್ನಲಾಗಿದೆ. ಈ ವರ್ಷ ಹತ್ತಿ ಉತ್ಪಾದನೆ ಮತ್ತು ಬಳಕೆ ಸುಮಾರು ಹಿಂದಿನ ವರ್ಷದಷ್ಟೇ 33ಮಿಲಿಯನ್ ಬೇಲ್‌ಗಳಾಗಬಹುದೆನ್ನಲಾಗಿದ್ದು, ಹಿಂದಿನ ವರ್ಷದ ಅಂತಿಮ ದಾಸ್ತಾನು 3.5ಮಿಲಿಯನ್ ಬೇಲ್‌ಗಳಾಗಬಹುದೆನ್ನಲಾಗಿದೆ. ರಫ್ತು ಹಿಂದಿನ ವರ್ಷಕ್ಕೆ ಸಮನಾಗಿದ್ದಲ್ಲಿ ದರ ಇನ್ನೂ ಹೆಚ್ಚಳವಾಗುವ ಸಂಭವಿದೆಯೆನ್ನಲಾಗಿದೆ.